# ಸೈಕ್ಲಿಂಗ್ ಮಾಡುತ್ತೇನೆ

**ಪ್ರದ್ಯುಮ್ನ ಜಿ.**
ಉದಯದ 'ಜೈ ಹನುಮಾನ್'ನ ಬಾಲಹನುಮಾನ್



★ *ನಿನಗೆ ಯಾವ ಆಟ ಇಷ್ಟ? ಯಾವಾಗ ಆಡ್ತೀಯಾ?*

ನನಗ ಕ್ರಿಕೆಟ್ ಇಷ್ಟ. ಆಡಲು ಸಮಯ ಸಿಗುವುದಿಲ್ಲ. ಶಾಲೆ– ಸೀರಿಯಲ್ ಚಿತ್ರೀಕರಣದ ನಡುವೆ ನನ್ನ ಸಮಯ ವ್ಯಯವಾಗುತ್ತದೆ. ಶೂಟಿಂಗ್ ಇದ್ದಾಗ ಬೆಳಗ್ಗಿನಿಂದ ರಾತ್ರಿ ತನಕ ಅಲ್ಲೇ ಕಳೆದುಹೋಗುತ್ತದೆ.

★ *ಆಟ ಆಡಲು ಸಮಯ ಸಿಗಲ್ಲ ಎಂದು ಬೇಜಾರಾಗುತ್ತಾ?*

ಇಲ್ಲ. ಯಾವತ್ತೂ ಬೇಜಾರಾಗಿಲ್ಲ. ದೇವರು ಕೊಟ್ಟಿರುವ ಅವಕಾಶ ಇದು. ಟಿವಿಯಲ್ಲಿ ನನ್ನನ್ನು ನೋಡಬೇಕು ಎನ್ನುವ ಆಶೆ ಇದೆ.

★ *ನಿನ್ನ ಗೆಳೆಯರೆಲ್ಲಾ ಏನು ಹೇಳ್ತಾರೆ?*

ಶಾಲೆಯಲ್ಲಿ ನನ್ನ ಸ್ನೇಹಿತರು ನನಗಾಗಿ ಕಾದು ಕುಳಿತು ಧಾರಾವಾಹಿ ನೋಡುತ್ತಾರೆ, ಹುರಿದುಂಬಿಸುತ್ತಾರೆ. 'ಏನೋ ಪ್ರದ್ಯುಮ್ನ, ನಿಂದೆ ಚಾನ್ಸು ಕಣೋ. ಹೀಗೆ ಮಾಡ್ತೀರೋ. ನಮ್ಮ ನೋಟ್ಸ್ ಎಲ್ಲಾ ನಿನಗೆ ಕೊಡುತ್ತೇವೆ' ಎಂದು ಹೇಳುತ್ತಾರೆ. ಶಾಲೆಯಲ್ಲಿ ಟೀಚರ್ಸ್ ಕೂಡ ಬೆಂಬಲಿಸುತ್ತಾರೆ. ಅಗತ್ಯ ಇದ್ದಾಗ ರಜೆ ನೀಡುತ್ತಾರೆ. ಪಾಠಗಳ ವಿಷಯದಲ್ಲಿಯೂ ಸಹಾಯ ಮಾಡುತ್ತಾರೆ. ಅವರ ಬೆಂಬಲದಿಂದ ಓದು ಕಷ್ಟ ಎಂದು ನನಗೆ ಅನ್ನಿಸುತ್ತಿಲ್ಲ.

★ *ಮುಂದೆ ಏನು ಮಾಡಬೇಕು ಎಂದುಕೊಂಡಿದ್ದೀಯಾ?*

ನಮ್ಮ ಮನೆಯಲ್ಲಿ ಒಮ್ಮೆ ಹಿರಿಯರೆಲ್ಲಾ ಸೇರಿದ್ದಾಗ ಹಾರ್ಟ್ ಸರ್ಜನ್ ಬಗ್ಗೆ ಚರ್ಚಿಸುತ್ತಿದ್ದರು. ಅದನ್ನು ಕೇಳಿಸಿಕೊಂಡ ನನಗೆ ಸರ್ಜನ್ ಆಗಲೇಬೇಕು. ಹೃದಯ ಇಲ್ಲವೆ ಮೆದುಳು ಶಸ್ತ್ರಚಿಕಿತ್ಸೆಯಲ್ಲಿ ಪ್ರಾವೀಣ್ಯ ಗಳಿಸಬೇಕು ಎಂದು ನಿರ್ಧರಿಸಿದ್ದೇನೆ. ಖಂಡಿತಾ ಆ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇನೆ. ಪ್ರೌಢ ಶಾಲೆಯ ನಂತರ ಓದಿಗೆ ಹೆಚ್ಚಿನ ಮಹತ್ವ ಕೊಡುತ್ತೇನೆ.



ನಂತರವೂ ಅವಕಾಶ ಸಕ್ಕರೆ ಅಭಿನಯಿಸುತ್ತೇನೆ. ಒಟ್ಟಾರೆ ಎರಡರಲ್ಲೂ ಸಮತೋಲನ ಕಾಯ್ದುಕೊಳ್ಳಬೇಕು.

★ *ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಏನು ಮಾಡ್ತೀಯಾ?*

ಸೈಕ್ಲಿಂಗ್ ಮಾಡುತ್ತೇನೆ. ಮನೆಯ ಊಟವನ್ನೇ ಮಾಡುತ್ತೇನೆ. ಹೊರಗಡೆ ಹೋದಾಗ ಮಾತ್ರ ಹೊರಗಡೆಯ ಊಟ. ಆದಷ್ಟು ಜಂಕ್ ಪದಾರ್ಥಗಳನ್ನು ಸೇವಿಸುವುದಿಲ್ಲ.

★ *ನಟನೆ ರೂಢಿಯಾಗಿದ್ದು ಹೇಗೆ ಎನ್ನುವ ಪ್ರಶ್ನೆಗೆ ಅವರ ತಾಯಿ ಹೀಗೆ ಹೇಳುತ್ತಾರೆ.*

'ನಾನು ಚಂದ್ರಿಕಾ, ಬೆಂಗಳೂರಿನಲ್ಲೇ ನೆಲೆಸಿದ್ದೇವೆ. ಪತಿ ಗಿರೀಶ್ ಎನ್‌ಜಿಒದಲ್ಲಿ ಎಚ್‌ಆರ್ ಮ್ಯಾನೇಜರ್ ಆಗಿದ್ದಾರೆ. ಅವರು ರಂಗಭೂಮಿ ನಟರು. ಈ ಟಿವಿಯ 'ಪಾಪ ಪಾಂಡು'ವಿನಲ್ಲಿ ಅಭಿನಯಿಸುತ್ತಿದ್ದರು. ಸಮಯಾವಕಾಶ ಇಲ್ಲದ ಕಾರಣ ಸೀರಿಯಲ್ ನಟನೆ ಬಿಟ್ಟಿದ್ದಾರೆ. ಅವಕಾಶ ಸಿಕ್ಕಾಗ ನಾಟಕಗಳನ್ನು ಆಡುತ್ತಾರೆ. ನನ್ನ ಹಿರಿಯ ಮಗ ಪ್ರಣವ್ ಕೂಡ ನಟ. ಅವನು ಪ್ರೌಢ ಶಾಲೆಯ ನಂತರ ನಟನೆಯನ್ನು ಬಿಟ್ಟಿದ್ದಾನೆ. ಪ್ರದ್ಯುಮ್ನ ತನ್ನ ಐದನೇ ವಯಸ್ಸಿನಿಂದಲೇ ನಟಿಸುತ್ತಿದ್ದಾನೆ. ಅವನಿಗೆ ಇದು ನಾಲ್ಕನೇ ಧಾರಾವಾಹಿ. 'ಅಸತೋಮಾ ಸದ್ಗಮಯ' ಸಿನಿಮಾದಲ್ಲೂ ನಟಿಸಿದ್ದಾನೆ. ಸುಮಾರು ಟಿವಿ ಕಾರ್ಯಕ್ರಮಗಳು, ಸಿನಿಮಾಗಳಿಗೆ ಎಪ್ಪತ್ತರಿಂದ ಎಂಬತ್ತು ಕಂಠದಾನವನ್ನೂ ಮಾಡಿದ್ದಾನೆ. ಅವನಿಗೆ ಅವಕಾಶಗಳು ಬರ್ತಾನೇ ಇವೆ. ಓದಿನಲ್ಲೂ ತುಂಬಾ ಚುರುಕಾಗಿದ್ದಾನೆ. ಸದ್ಯ ಎರಡನ್ನೂ ಮಾಡುತ್ತಾನೆ. ಉನ್ನತ ತರಗತಿಗಳಿಗೆ ಬಂದ ನಂತರ ಏನಾಗುತ್ತೋ ನೋಡಬೇಕು. ಓದಿಗೂ ಮಹತ್ವ ನೀಡಿದ್ದಾನೆ.'

■ **ರಾಘವೇಂದ್ರ**